ಮುದುಕ ಅರ್ಧದಷ್ಟನ್ನು ಮೇಜಿನ ಮೇಲೆ ಚೆಲ್ಲಿದ. ಗ್ಲಾಸಿಗೆ ಬಿಯರ್ ಸುರಿಯುತ್ತಿರುವ ಅವನ ನೆರಳು ಹಿಂಬದಿಯ ಗೋಡೆಯ ಮೇಲೆ ವಿಚಿತ್ರವಾಗಿ ಕಾಣಿಸುತ್ತಿತ್ತು. ಈ ಜಾಗದ ಉಸ್ತುವಾರಿ ನೋಡಿಕೊಳ್ಳುತ್ತಿರುವ ಈ ಅಸಂಗತ ಪಾತ್ರಧಾರಿಗಳನ್ನು ಎದುರುಗೊಳ್ಳಬೇಕಾಗುತ್ತದೆಂದು ಖಂಡಿತ ನಾನೆಣಿಸಿರಲಿಲ್ಲ. ವಯಸ್ಸು ಮಾಗುತ್ತಿದ್ದಂತೆ ಮಾನವೀಯ ಗುಣಗಳೂ ಕಳಚಿಕೊಳ್ಳುತ್ತವೆಯೋ ಏನೋ ಎಂದು ಭಾಸವಾಗತೊಡಗಿತು. ಈ ಮೂವರೂ ನನ್ನೊಳಗೆ ಒಂದು ವಿಧದ ಕಿರಿಕಿರಿಯನ್ನುಂಟು ಮಾಡತೊಡಗಿದರು. ಆದಷ್ಟು ಬೇಗ ಅವರ ಸಮ್ಮುಖದಿಂದ ಕಳಚಿಕೊಂಡು ಮಹಡಿಯ ಮೇಲಿನ ಅವರು ಹೇಳಿದ ದುಷ್ಟ ಶಕ್ತಿಗಳು ನೆಲೆಸಿರುವ ಕೋಣೆಗೆ ಹೋಗಲು ಆತುರನಾದೆ.

''ನಾವು ಮಹಡಿಯ ಮೇಲಿನ ದೆವ್ವದ ರೂಮಿಗೆ ಹೋಗೋಣವೇ? ನನಗೆ ಸ್ವಲ್ಪ ಆರಾಮ ಮಾಡೋಣ ಅಂತ ಅನಿಸುತ್ತಿದೆ.'' ಎಂದೆ ಎದ್ದು ನಿಲ್ಲುತ್ತಾ.

ಕೆಮ್ಮುತ್ತಿದ್ದ ಮುದುಕ ಒಮ್ಮೆಲೇ ಆಘಾತಗೊಂಡವನಂತೆ ತಲೆಯನ್ನು ಹಿಂದಕ್ಕೆ ಬಾಗಿಸಿ ತನ್ನ ಕೆಂಪು ಕಣ್ಣುಗಳಿಂದ ನನ್ನನ್ನೇ ದಿಟ್ಟಿಸಿ ನೋಡತೊಡಗಿದ. ಉಳಿದಿಬ್ಬರು ತಮಗೆ ಕೇಳಿಸಿಯೇ ಇಲ್ಲವೆನ್ನುವಂತೆ ಏನೂ ಪ್ರತಿಕ್ರಿಯೆ ತೋರದೆ ಗೋಡೆಯನ್ನೇ ದಿಟ್ಟಿಸುತ್ತಿದ್ದರು. ನಾನು ಕೆಲ ಸಮಯ ಅವರನ್ನೇ ನೋಡುತ್ತಾ ನಿಂತುಕೊಂಡೆ.

ನಾನು ಜೋರಾಗಿ ಕೆಮ್ಮುತ್ತಾ, ದನಿ ಎತ್ತರಿಸಿ ಮತ್ತೆ ಕೇಳಿದೆ: ''ದೆವ್ವದ ರೂಮಿಗೆ ಹೋಗೋಣವೇ?''

''ರೂಮಿನ ಹೊರಗೆ ಬೆಂಚಿನ ಮೇಲೆ ಮೇಣದ ಬತ್ತಿ ಇದೆ...'' ನನ್ನ ಕಾಲ ಬುಡವನ್ನು ನೋಡುತ್ತಾ ಸೊಟ್ಟ ಕೈಯ ಮುದುಕ ಹೇಳುತ್ತಾ, ''ನೀನು ಇಂದು ರಾತ್ರಿಯೇ ಕೆಂಪು ಕೋಣೆಗೆ ಹೋಗುವುದಾದರೆ...'' ಎಂದು ಮಾತು ನಿಲ್ಲಿಸಿದ.

''ಅದೂ, ಎಲ್ಲಾ ಬಿಟ್ಟು ಇಂದಿನ ರಾತ್ರಿ!!...'' ಮುದುಕಿ ಮೆಲ್ಲಗೆ ಉಸುರಿದಳು. ''ನೀನೊಬ್ಬನೇ ಹೋಗಪ್ಪ.''

''ನೀವು ಬರುವುದು ಬೇಡ. ದಾರಿ ಹೇಳಿದರೆ ಸಾಕು.'' ನಾನೆಂದೆ.

''ಹೊರಗೆ ಪಡಸಾಲೆಯಿಂದ ಸ್ವಲ್ಪ ಮುಂದಕ್ಕೆ ಹೋದರೆ ಸುರುಳಿ ಮೆಟ್ಟಿಲುಗಳು ಸಿಗುತ್ತವೆ. ಮೇಲೆಹತ್ತಿ ಎರಡನೇ ಮಹಡಿಗೆ ಹೋಗಬೇಕು. ಎದುರಿನ ಪಡಸಾಲೆಯಲ್ಲಿ ಹಾಗೇ ಹೋಗುತ್ತಿದ್ದಂತೆ ಕೊನೆಯಲ್ಲಿ ಎಡಕ್ಕೆ ಹಸಿರು ಬಾಗಿಲೇ 'ಕೆಂಪು ಕೋಣೆ'ಯದು.'' ಎಂದ ಮುದುಕ.

ನಾನು ಹೊರಡಲಣಿಯಾದೆ.

''ನೀನು ನಿಜವಾಲೂ ಹೋಗುತ್ತೀಯೆನಪ್ಪ?'' ಗೂನು ಬೆನ್ನಿನ ಮುದುಕ ನನ್ನನ್ನು ಮತ್ತೊಮ್ಮೆ ದಿಟ್ಟಿಸುತ್ತಾ ಕೇಳಿದ.

''ಅದೂ, ಇವತ್ತಿನ ರಾತ್ರಿ?!'' ಮತ್ತೊಮ್ಮೆ ಕೇಳಿತು ಮುದುಕಿ.

''ನಾನು ಬಂದಿರುವುದೂ ಅದಕ್ಕೇ ತಾನೆ?'' ಎನ್ನುತ್ತಾ ನಾನು ಬಾಗಿಲ ಕಡೆಗೆ ನಡೆಯತೊಡಗಿದೆ. ಗೂನು ಬೆನ್ನಿನ ಮುದುಕ ತಡವುತ್ತಾ ಎದ್ದು ನಿಂತು ಉಳಿದಿಬ್ಬರು ಕುಳಿತಿದ್ದ ಬೆಂಕಿ ಗೂಡಿನ ಕಡೆಗೆ ನಡೆದ.

ನಾನು ಹೊರಗೆ ಕಾಲಿಡುವ ಮೊದಲು ಮತ್ತೊಮ್ಮೆ ಅವರೆಡೆಗೆ ನೋಡಿದೆ. ಆ ಪುರಾತನ ಜೀವಿಗಳು ಬಾಯ್ಬಿಟ್ಟು ನನ್ನನ್ನೇ ನೋಡುತ್ತಿದ್ದವು. ಸುಕ್ಕುಗಟ್ಟಿದ್ದ ಆ ಮುಖಗಳ ಮೇಲೆ ದಿಗ್ಭ್ರಮೆ ಎದ್ದು ಕಾಣುತ್ತಿತ್ತು.

''ನಿಮಗೆಲ್ಲಾ ಶುಭರಾತ್ರಿ!'' ಎಂದೆ ಹೊರಗೆ ಕಾಲಿಡುತ್ತಾ.

''ಇದು ನಿನ್ನದೇ ಆಯ್ಕೆ...'' ಎಂದ ಸೊಟ್ಟ ಕೈಯ ಮುದುಕ.

ಹೊರಗೆ ಬೆಂಚಿನ ಮೇಲಿದ್ದ ಮೇಣದ ಬತ್ತಿಯನ್ನು ಉರಿಸಿ, ಬಾಗಿಲನ್ನು ಮುಚ್ಚುತ್ತಾ ನಾನು